'ಅಮ್ಮ ಇದ್ದಾರಾ ಅಲ್ಲಿ?'

'ಇಲ್ಲ. ಯಾರೂ ಇಲ್ಲ'.

'ಮತ್ತೇಕೆ ಭಯ ನಿನಗೆ. ನೀನೊಬ್ಬೇ ಇದ್ದಿಯಾ ಅಂತ ಭಯನಾ?'

'ಅಲ್ಲ. ಅವರು ಬಂದು ನಿಂತಿದ್ರು. ಬಾ ಅಂತ ಕರೀತಿದ್ರು. ನಾನು ಆ ಕೋಣೆಗೆ ಹೋಗಲ್ಲ' ನಿವಿ ತಲೆಕೊಡವುತ್ತಾ ನಡುಗುತ್ತಾ ಕಣ್ಣೀರಿಡುತ್ತಾ ನುಡಿದಳು.

'ಆ ಕೋಣೆಗೆ ಹೋಗೋಕ್ಕೆ ನಿನಗೆ ಭಯನಾ?'

'ಹೌದು'.

'ಸರಿ. ನಿನಗೆ ನಾನು ಒಂದು ಶೀಲ್ಡ್ ಅಂದರೆ ಒಂದು ಕವಚ ಕೊಡ್ತೀನಿ. ಅದು ನಿನ್ನ ಜೊತೆ ಇರುತ್ತೆ. ನಿನಗೆ ಧೈರ್ಯ ಕೊಡುತ್ತೆ. ರಕ್ಷಣೆಗೆ ಅದು ನಿನ್ನ ಜೊತೆ ಬರುತ್ತೆ. ಅದನ್ನು ಹಿಡಿದು ನೀನು ಯಾವ ಸನ್ನಿವೇಶವನ್ನಾದರೂ ಕೂಡ ಧೈರ್ಯವಾಗಿ ಎದುರಿಸಬಹುದು. ಸರಿನಾ?'

ನಿವಿ ಮಾತನಾಡಲಿಲ್ಲ.

'ನಿನ್ನ ಹತ್ರ ಒಂದು ಹುಲಿ ಇತ್ತಲ್ವಾ? ಅದು ಹೇಗಿತ್ತು ಹೇಳು?'

'ಕ್ರೂರವಾಗಿದೆ. ಅದರ ಹಲ್ಲುಗಳು ಚೂಪಾಗಿವೆ. ಅದು ಯಾರನ್ನಾದರೂ ಹರಿದು ತಿಂದುಹಾಕುತ್ತೆ'

'ಅದನ್ನು ಯಾಕೆ ಜೋಪಾನ ಮಾಡಿ ತೆಗೆದಿಟ್ಟುಕೊಂಡಿದ್ದೀಯಾ?'

ನಿವಿ ಉತ್ತರಿಸಲಿಲ್ಲ.

'ಹೌದು. ನೀನು ತಿಳಿಸಿದಂತೆ ಅದು ಬಲವಾದ ಪ್ರಾಣಿ. ಅದು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುತ್ತಲ್ವಾ. ಯಾರಿಗೂ ಹೆದರಲ್ಲ. ಯಾಕೆ ಅಂದರೆ ಅದಕ್ಕೆ ತನ್ನ ಬಲದ ಮೇಲೆ ನಂಬಿಕೆ ಇದೆ. ಅದು ತನ್ನ ಶಕ್ತಿಯನ್ನು ಉಪಯೋಗಿಸಿ ಎದುರಿಗಿದ್ದವರನ್ನು ಕೊಂದು ತನ್ನ ಆಹಾರ ಮಾಡಿಕೊಳ್ಳುತ್ತೆ. ಅದಿಕ್ಕೆ ಈ ಗುಣಗಳು ನಿನಗೆ ಇಷ್ಟನಾ?'

'ಹೌದು. ಆ ಕಾರಣಕ್ಕೇ ಅದನ್ನು ನಾನು ನನ್ನ ಹತ್ರನೇ ಇಟ್ಟುಕೊಳ್ಳುತ್ತಿದ್ದೆ. ನನಗೆ ಹಾಗಾಗಲು ಸಾಧ್ಯವಿಲ್ಲವಲ್ಲ'.

'ಹಾಗಾಗಲು ಸಾಧ್ಯವಾಗದಿದ್ದ ರೇನಂತೆ? ನೋಡು ಈಗಲೂ ಅದು ನಿನ್ನ ಜೊತೆನೇ ಇದೆ. ನಿನ್ನ ರಕ್ಷಣೆಗೆ ಅದು ನಿನ್ನ ಮನೆಯಿಂದ ನಿನ್ನ ಜೊತೆಗೇ ಬಂದಿದೆ. ನಿನ್ನ ಮಾತು ಅದಕ್ಕೆ ಕೇಳ್ತಿದೆ. ನಿನಗೆ ಧೈರ್ಯ ಕೊಡುತ್ತಿದೆ. ಅದು ನಿನ್ನ ಪಕ್ಕದಲ್ಲೇ ಇದೆ. ನೋಡಿದ್ಯಾ?'.

ನಿವಿ ಕುಳಿತಲ್ಲೇ ಪಕ್ಕ ತಿರುಗಿ ಕಣ್ಮುಚ್ಚಿಯೇ ನೋಡಿದಂತೆ ಮಾಡಿ, 'ಹೌದು. ಇದೆ' ಎಂದು ನಿವೇದಿತಾ ಮಂಪರಿನಲ್ಲಿದ್ದಂತೆ ಉತ್ತರಿಸಿದಳು.

"ಅದು ನಿನ್ನ ರಕ್ಷಣೆಗೆ ಇರುವಾಗ ನಿನಗೆ ಕೋಣೆಗೆ ಹೋಗಲು ಭಯ ಯಾಕೆ? ಹೋಗು. ಅದೇ ನಿನ್ನ ಶೀಲ್ಡ್ ಆಗಿ ನಿನ್ನ ಜೊತೆ ಬರುತ್ತೆ. ನೀನು ಹೋಗು. ಅಲ್ಲಿ ಯಾರಿದ್ದಾರೆ ಹೇಳು?'

ನಿವಿ ಮಾತನಾದಲಿಲ್ಲ. ಡಾ. ರೂಪಾ ಉಸಿರು ಬಿಗಿ ಹಿಡಿದುಕೊಂಡು ಅವಳ ಉತ್ತರಕ್ಕೆ ಕಾದರು.

'ಅರವಿಂದ ಮಾವ! ಅವರು ನನ್ನ ಹತ್ತಿರ ಕರೆದರು. ಕಥೆ ಹೇಳುತ್ತೇನೆಂದು ಅವ್ರ ತೊಡೆ ಮೇಲೆ ಕುಳ್ಳಿರಿಸಿ, ಎಲ್ಲೆಲ್ಲೋ ಕೆಟ್ಟದಾಗಿ ಮುಟ್ಟುತ್ತಿದ್ದರು. ನನಗೆ ಇಷ್ಟ ಆಗುತ್ತಿರಲಿಲ್ಲ'.

'ಮನೇಲಿ ಯಾರೂ ಇರಲಿಲ್ವಾ?'

'ಅಮ್ಮ, ಅಪ್ಪ ಕೆಲಸಕ್ಕೆ ಹೋಗ್ತಿದ್ರು. ಬರುವಾಗ ತಡ ಆಗುತ್ತಿತ್ತು. ಅಮ್ಮನಿಗೆ ತುಂಬಾ ಕೆಲಸ. ನನಗೆ ಮಾವನ ಬಳಿ ಹೋಗಲೇ ಭಯ. ನಾನು ಕತ್ತಲೇಲಿ ಭಯದಿಂದ ಕುಳಿತಾಗ ಹುಡುಕಿಕೊಂಡು ಬರುತ್ತಿದ್ದರು. ನನ್ನ ಮೇಲೆ ಮಲಗಿ' ನಿವಿಯ ಕೆನ್ನೆಯಿಂದ ನೀರಿಳಿಯಿತು.

'ಅಳಬೇಡ, ನೋಡು. ಈ ಮಾತು ನಿನ್ನ ಅಪ್ಪ, ಅಮ್ಮನಿಗೆ ಯಾಕೆ ಹೇಳಲಿಲ್ಲ?'

'ಮಾವ ನನಗೆ ಯಾರಿಗೂ ತಿಳಿಸದಂತೆ ಹೆದರಿಸಿದರು. ಅಮ್ಮನ ಬಳಿ ಹೇಳಲು ಹೋದಾಗಲೆಲ್ಲ ಅಮ್ಮ ಮಾವನನ್ನೇ ವಹಿಸಿಕೊಂಡು ಮಾತನಾಡುತ್ತಿದ್ದರು. ಅವರಿಗೆಲ್ಲಾ ಮಾವ ತುಂಬಾ ಒಳ್ಳೆಯವರು. ದೇವತಾ ಮನುಷ್ಯ. ಅವರು ನಮಗೆ ಮನೆ ಕಟ್ಟಿಸಿ ಕೊಡುತ್ತಿದ್ದರಂತೆ. ಅಮ್ಮನಿಗೆ, ಅಪ್ಪನಿಗೆ ಅವರು ಹಣ ಸಹಾಯ ಮಾಡಿದ ಕಾರಣ ಅವರ ಬಗ್ಗೆ ಬಹಳ ನಂಬಿಕೆ, ಗೌರವ. ನನ್ನ ಮಾತು ಯಾರೂ ಕೇಳುತ್ತಲೇ ಇರಲಿಲ್ಲ. ನನಗೆ ಅವರನ್ನು ಕಂಡರೆ ಬಹಳ ಸಿಟ್ಟು ಬರುತ್ತೆ. ಅವರು ಕಲಿಸುತ್ತೇನೆ ಎಂದು ಬಂದರೆ ನನಗೆ ಓದಲಾಗುತ್ತಲೇ ಇರಲಿಲ್ಲ. ಕಡೆಗೆ ನಾನು ಫೇಲ್ ಆದೆ. ಅಮ್ಮ ಸರಿಯಾಗಿ ಹೊಡೆದರು. ಅಪ್ಪ ಬೇಜಾರು ಮಾಡಿಕೊಂಡು ಸ್ವಲ್ಪ ದಿನ ಮಾತು ಬಿಟ್ಟರು. ಮತ್ತೆ ಇದನ್ನು ಯಾರಲ್ಲಿ ಹೇಳಲಿ? ನನ್ನನ್ನು ಯಾರೂ ಅರ್ಥನೇ ಮಾಡಿಕೊಳ್ಳುತ್ತಿರಲಿಲ್ಲ' ನಿವಿಯ ದುಗುಡವೆಲ್ಲವೂ ಕಂಬನಿಯಾಗಿ ಹೊರ ಬಂದಿತ್ತು.

'ನೀನು ಅವರ ಮಗಳನ್ನು ಕಂಡರೆ ಸಿಟ್ಟು ಮಾಡಿಕೊಳ್ಳುತ್ತಿದ್ದದ್ದು ಇದೇ ಕಾರಣಕ್ಕಾ? ಹೆಣ್ಣು ಗೊಂಬೆಗಳನ್ನು ಹಾಳು ಮಾಡುತ್ತಿದ್ದದ್ದು?'

'ಹೌದು. ಆ ಗೊಂಬೆಗಳೆಲ್ಲಾ ನನ್ನನ್ನು ಅಣಕಿಸುವಂತೆ ತೋರುತ್ತಿದ್ದವು. ನನಗೆ ಅವುಗಳಂತೆ ಮುಕ್ತವಾಗಿ ನಗಲು ಆಗುತ್ತಲೇ ಇರಲಿಲ್ಲ. ಏನೋ ಕಳಕೊಂಡಂತೆ ಚಡಪಡಿಸುತ್ತಿದ್ದೆ. ಯಾರಲ್ಲೂ ಹೇಳಿಕೊಳ್ಳಲಾಗದ ಹೊರೆ ಹೃದಯದಲ್ಲಿ ಬೆಂಕಿಯಂತೆ ಹೊತ್ತು ತಿರುಗುತ್ತಿದ್ದೆ. ವಿನಾಕಾರಣ ದ್ವೇಷ, ಆಕ್ರೋಶ. ನನ್ನ ಮನಸ್ಸಿನ ನೆಮ್ಮದಿಯನ್ನೇ ಸುಟ್ಟು ಕರಕಲಾಗಿಸಿತ್ತು. ಆತ್ಮ ಗಾಸಿಗೊಂಡಿತ್ತು. ನಗುವ ಆ ಗೊಂಬೆಗಳನ್ನು ಕಾಣುವಾಗ ಅವನ ಮಗಳು ನೆನಪಾಗುತ್ತಿತ್ತು. ಅವಳು ಮಾತ್ರ ಖುಷಿಯಲ್ಲಿರಬೇಕು. ನನಗೆ ಹಾಗಿರಲು ಆಗುವುದಿಲ್ಲ ಎಂದು ಸಿಟ್ಟು. ಅವಳು ಮಾತ್ರ ಚೆನ್ನಾಗಿರಬೇಕು. ನಾನು ಹೀಗೆ ಇರಬೇಕಾ? ಅದಿಕ್ಕೆ ಅವಳನ್ನು ಮೆಟ್ಟಿಲಿನಿಂದ ದೂಡಿದ್ದು. ಅವಳನ್ನು ಕಂಡರೆ ಹೊಡೆಯುವಷ್ಟು ಕೋಪ ಬರುತ್ತಿತ್ತು. ಅವಳನ್ನು ಕಂಡರೆ ಮಾವನನ್ನೇ ನೋಡಿದ ಹಾಗೆ ಆಗುತ್ತಿತ್ತು. ಅವಳು ಜಾಣೆಯಂತೆ. ನಾನು ಓದುವುದಿಲ್ಲವಂತೆ. ಅಮ್ಮ ಹಂಗಿಸುವಾಗ ನನಗೆ ಸಿಟ್ಟು ಬರಲ್ವಾ? ನನಗೆ ದಡ್ಡಿ ಆಗಲು ಅವರೇ ಕಾರಣ ಅಲ್ವಾ? ಅದಿಕ್ಕೇ ಅವಳ ಪುಸ್ತಕ ಸುಟ್ಟು ಹಾಕಿದ್ದು.'

'ಅಳಬೇಡ. ಈಗ ಆ ಸಮಸ್ಯೆಯನ್ನು ಸರಿ ಮಾಡೋಣ. ಎಲ್ಲರಿಗೂ ನಿನ್ನ ಮಾವನ ವಿಚಾರ ಹೇಳೋಣ ಸರೀನಾ? ನಿನ್ನ ಬಳಿ ನಿನ್ನ ರಕ್ಷಣೆಗೆ ಯಾರು ಇದ್ದಾರೆ ಹೇಳು ಕವಚವಾಗಿ?'

'ಹುಲಿ'.

'ಆ ಹುಲಿಯನ್ನು ನೀನು ಮಾವನ ಮೇಲೆ ಛೂ ಬಿಡು. ಅದು ಅವರನ್ನು ಗಾಯಗೊಳಿಸಲಿ ಬಿಡು'.

ನಿವಿ ತನ್ನ ಕಲ್ಪನಾಲೋಕದಲ್ಲೇ ಅರವಿಂದ ಮೇಲೆ ಹುಲಿಯನ್ನು ಛೂ ಬಿಟ್ಟಳು. ಅವಳು ಜೋರಾಗಿ ನಕ್ಕಾಗ ಡಾ. ರೂಪಾ ಕೇಳಿದರು,

'ಏನಾಯಿತು?'

'ಮಾವ ಹೆದರಿ ಓಡೇ ಹೋದರು. ಹುಲಿ ಅವರ ಹಿಂದೆ ಬೆನ್ನಟ್ಟಿ ಹೋಯಿತು. ಇನ್ನು ಅವರು ನನ್ನ ತಂಟೆಗೆ ಬರಲ್ಲ' ಅವಳ ಮುಖದಲ್ಲಿ ಸಂತೃಪ್ತಿಯ ನಗು ಮಿನುಗಿತು.

'ಇನ್ನು ಮೇಲೆ ಅವರು ನಿನ್ನ ತೊಂದರೆ ಕೊಡಲು ಬರುವುದಿಲ್ಲ. ಈಗ ಸಮಾಧಾನ ಆಯಿತಾ?'

'ಹೌದು'.

'ಇನ್ನು ಮೇಲೆ ನಿನಗೆ ಜೀವನದಲ್ಲಿ ಏನೇ ಪ್ರಸಂಗ ಬಂದರೂ ಹೀಗೆ ಧೈರ್ಯವಾಗಿ ಎದುರಿಸುತ್ತೀಯಾ? ನಿನಗೀಗ ಧೈರ್ಯ ಬಂದಿದೆ. ನೀನು ಈಗ ದುರ್ಬಲ ಮನಸ್ಸಿನ, ಅಬಲೆ ಹೆಣ್ಣಲ್ಲ. ಅತ್ತು ಕರೆದು, ಮುಚ್ಚಿಟ್ಟು ಯಾವ ಸಮಸ್ಯೆಯೂ ಪರಿಹಾರವಾಗುವುದಿಲ್ಲ. ಏನೇ ಇದ್ದರೂ ಸಮಸ್ಯೆ ಹೇಳಿಕೊಂಡಾಗಲಷ್ಟೇ ಅದಕ್ಕೊಂದು ಪರಿಹಾರ ಸಾಧ್ಯ. ನೋಡು ಈಗ ನಿನ್ನ ಎದೆಯ ಮೇಲಿದ್ದ ದೊಡ್ಡ ಹೊರೆ ಇಳಿದಿದೆ. ನಿನ್ನ ಮಾವನಿಗೆ ತಕ್ಕ ಶಾಸ್ತಿ ಆಗಿದೆ. ಎಲ್ಲರಿಗೂ ಅವರ ಬಗ್ಗೆ ಗೊತ್ತಾಗಿದೆ. ನೀನೀಗ ಅಳುಕಬೇಕಾಗಿಲ್ಲ. ಈ ಸಮಸ್ಯೆಯನ್ನು ಧೈರ್ಯವಾಗಿ ಎದುರಿಸಿ ನೀನೀಗ ಆ ಕೋಣೆಯಿಂದ ಹೊರ ಬರುತ್ತೀಯಾ. ಇಷ್ಟು ದಿನ ಅನುಭವಿಸಿದ ಕ್ಷೋಭೆಯಿಂದ, ಪಾಪ ಪ್ರಜ್ಞೆಯಿಂದ ಬಿಡುಗಡೆ ಹೊಂದಿ ಹೊರಬರುತ್ತಿದ್ದೀಯಾ. ಆತ್ಮವಿಶ್ವಾಸದಿಂದ, ನಿರಾಳವಾಗಿ, ಆತ್ಮಶುದ್ಧಿಯಿಂದ! ಇನ್ನು ಮೇಲೆ ಸಹಜವಾದ ನೆಮ್ಮದಿಯ ಜೀವನ ಅನುಭವಿಸುತ್ತೀಯಾ. ಸರೀನಾ? ನಿಧಾನವಾಗಿ ಮತ್ತೆ ನೀನು ಯಥಾಸ್ಥಿತಿಗೆ ಮರಳುತ್ತಿದ್ದೀಯಾ. ನಿನಗೆ ಮದುವೆ ಆಗಿದೆ. ನಿನ್ನ ಗಂಡನ ಹೆಸರೇನು?'

'ಪ್ರದೀಪ'.

'ಅವರು ಒಳ್ಳೆಯವರು. ನಿನ್ನ ತುಂಬಾ ಪ್ರೀತಿಸ್ತಾರೆ ತಾನೇ?'

'ಹೌದು'.

'ಹಾಗೇ ನಿಮ್ಮ ತಂದೆ ಕೂಡ ಒಳ್ಳೆಯವರು ತಾನೇ?'

'ಅವರು ಸೌಮ್ಯ ಮತ್ತು ಸಾತ್ವಿಕ ಮನುಷ್ಯ'.

'ಪ್ರಪಂಚದಲ್ಲಿ ಎಲ್ಲಾ ಗಂಡಸರು ಅರವಿಂದನ ಥರ ಇರುವುದಿಲ್ಲ. ಎಲ್ಲೋ ಕೆಲವರಷ್ಟೇ ಇರುತ್ತಾರೆ. ಹಾಗೆಂದು ಒಬ್ಬರು ಮಾಡಿದ ತಪ್ಪಿಗೆ ಎಲ್ಲರೂ ಹಾಗೇ ಎಂದು ಭಾವಿಸುವುದೂ ತಪ್ಪು. ನೀನು ಇನ್ನು ಮುಂದೆ ಇಂಥ ಭಾವನೆಯನ್ನು ಬದಲಿಸಿಕೊಳ್ಳುತ್ತೀಯಾ, ಸರಿಯಾ?'

'ಸರಿ'.

(ಸಶೇಷ)